


ನಾಂದಿಪದ

# ದಲಿತ ವಸಂತ

ಬಿಸಿಲು ಬಲಿಯುವ ಏಪ್ರಿಲ್ ತಿಂಗಳಲ್ಲಿ ಬೆಳುದಿಂಗಳೂ ತನ್ನ ತಂಪು ಕಳೆದುಕೊಂಡು ಕಾವನ್ನಷ್ಟೇ ಉಳಿಸಿಕೊಂಡಂತೆ ಭಾಸವಾಗುತ್ತದೆ. ಈ ಏಪ್ರಿಲ್ ತಿಂಗಳು ಬಾಬಾಸಾಹೇಬ್ ಅಂಬೇಡ್ಕರ್ ಅವರ ಹುಟ್ಟುಹಬ್ಬದೊಂದಿಗೆ ತಳಕು ಹಾಕಿಕೊಂಡಿರುವುದರಿಂದ, ಈ ದೇಶದ ಬಹುಸಂಖ್ಯಾತರಿಗೆ ಸ್ಮರಣೀಯವೂ ಸ್ಫೂರ್ತಿದಾಯಕವೂ ಆಗಿದೆ. ಅಂಬೇಡ್ಕರ್ ಜಯಂತಿ ಹೆಸರಿನಲ್ಲಿ ಇಡೀ ತಿಂಗಳು ವಿಚಾರ ವಿನಿಮಯ, ದಲಿತ ಚಿಂತನೆ ನಡೆಯುತ್ತದೆ. ಈ ಕಾರಣದಿಂದಾಗಿ ಯುಗಾದಿಯ ವಸಂತ ‘ದಲಿತ ವಸಂತ’ವೂ ಹೌದು. ದುರ್ಬಲ ಸಮುದಾಯಗಳಲ್ಲಿ ವಸಂತದ ಚಿಗುರು ಕೊನರಿಸುವ ಸಂದರ್ಭಕ್ಕೆ ಸ್ಪಂದನದ ರೂಪದಲ್ಲಿ ‘ಮಯೂರ’ದ ಏಪ್ರಿಲ್ ಸಂಚಿಕೆ ರೂಪುಗೊಂಡಿದೆ.

ದಲಿತ ಚಿಂತನೆಗಳನ್ನು ಲೇಖನಗಳ ಮೂಲಕ ಕಟ್ಟಿಕೊಡುವುದರ ಬದಲಾಗಿ, ಕಥೆ–ಕವಿತೆ ಹಾಗೂ ಮಾತುಕತೆಯ ಮೂಲಕ ಕಟ್ಟಿಕೊಡಲು ಪ್ರಯತ್ನಿಸಿದ್ದೇವೆ. ಆಶಯಗಳ ಕಾರಣದಿಂದ ಮಾತ್ರವಲ್ಲದೆ, ಹೊಸ ಧ್ವನಿಗಳು ಕನ್ನಡ ಕಥಾಲೋಕವನ್ನು ಪ್ರವೇಶಿಸುತ್ತಿರುವ ದೃಷ್ಟಿಯಿಂದಲೂ ಇಲ್ಲಿನ ಕಥೆಗಳಿಗೆ ಮಹತ್ವವಿದೆ. ಹೊಸ ಬರಹಗಾರರು ಕಾಣಿಸುತ್ತಿಲ್ಲ, ಹೊಸ ಬರಹಗಾರರಿಗೆ ಅವಕಾಶವಿಲ್ಲ ಎಂದು ಕೊರಗುವವರು ‘ಮಯೂರ’ದ ಸಂಚಿಕೆಗಳಲ್ಲಿನ ಹೊಸ ಫಸಲನ್ನು ಗಮನಿಸಬಹುದು.

ಪ್ರದರ್ಶನ ಕಲೆಗಳಿಗೆ ಸಂಬಂಧಿಸಿದ ಕಲಾವಿದರ ಬದುಕು ಮತ್ತು ಸಾಧನೆಯನ್ನು ಪರಿಚಯಿಸುವ ‘ಲಲಿತ ಮಂಟಪ’ ಮಯೂರದ ಜನಪ್ರಿಯ ಮಾಲಿಕೆ. ದೇಶದ ವಿವಿಧ ಭಾಗಗಳ ಪ್ರಸಿದ್ಧ ಕಲಾವಿದರು ಹಾಗೂ ಕಲಾ ಮೀಮಾಂಸಕರನ್ನೂ ಪರಿಚಯಿಸಿದ ಈ ಮಾಲಿಕೆ ಪ್ರಸಕ್ತ ಸಂಚಿಕೆಯಲ್ಲಿನ ಸೂಫಿ ಕಥಕ್ ನೃತ್ಯ ಕಲಾವಿದೆ ಮಂಜರಿ ಚತುರ್ವೇದಿ ಅವರ ಸಂದರ್ಶನದೊಂದಿಗೆ ಕೊನೆಗೊಳ್ಳುತ್ತಿದೆ. ಒಳ್ಳೆಯ ಸಂಗತಿಯೊಂದಕ್ಕೆ ವಿರಾಮ ನೀಡುವುದೆಂದರೆ, ಹೊಸತೊಂದರ ಹುಡುಕಾಟ ಎಂದರ್ಥ.

–ಮಯೂರ ಬಳಗ
editormy@mayura.co.in